3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.No.77/2016

ಪಿರ್ಯಾಧಿ : ರಾಜ್ಯದ ಪರವಾಗಿ, ಮಾಗಡಿ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ.

ವಿರುದ್ದ

ಆರೋಪಿ : ಮೊಹಮ್ಮದ್ ಬಾಬು ಮತ್ತು ಇತರರು

<u>ದೋಷಾರೋಪಣೆ</u>

ಶ್ರೀ.ಗೋಪಾಲ ಕೃಷ್ಣ ರೈ.ಟಿ, 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಆದ ನಾನು ಆರೋಪಿತರಾದ ನಿಮ್ಮ ಮೇಲೆ ಅಂದರೆ

ಆರೋಪಿತರು : 7. ಮೊಹಮ್ಮದ್ ಬಾಬು ಬಿನ್ ಲೇಟ್ ಮೊಹಮ್ಮದ್ ಹುಸೇನ್, 36 ವರ್ಷ, ವಾಸಃ ಆಲ್ಫಾಹತ್ ಸ್ಕೂಲ್ ಹತ್ತಿರ, ಶೋಭಾ ಟೆಂಟ್ ಹೌಸ್ ಹತ್ತಿರ, ಬಾಪೂಜಿ ನಗರ, ಬೆಂಗಳೂರು ನಗರ.

8. ಮೊಹಮ್ಮದ್ ಅಬ್ದುಲ್ ಘಾನಿ ಬಿನ್ ಲೇಟ್ ಮೂನಾವರ್ ಪಾಷ, 26 ವರ್ಷ, ವಾಸಃ ಸಿದ್ದಿಕಾ ಮಸೀದಿ ಹತ್ತಿರ, 10ನೇ ಅಡ್ಡ ರಸ್ತೆ, ಗಂಗೊಂಡನಹಳ್ಳಿ, ಚಂದ್ರ ಲೇಔಟ್, ಬೆಂಗಳೂರು ನಗರ.

9. ಇಮ್ರಾನ್ ಪಾಷ ಬಿನ್ ಅಮೀರ್ ಪಾಷ, 25 ವರ್ಷ, ವಾಸಃ ಪಾರುಕ್ಯ

ಮಸೀದಿ ಬಳಿ ಇರುವ ವಠಾರ, ಉರ್ದು
ಸ್ಕೂಲ್ ಹತ್ತಿರ, ಚಂದ್ರಾ ಲೇಔಟ್
ಡೌನ್, ಮೆಟ್ರೋ ಲೇಔಟ್, ಬೆಂಗಳೂರು
ನಗರ.

ಆದ ನಿಮ್ಮಗಳ ವಿರುದ್ದ ಮಾಡುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ, ಆರೋಪಿ 1 ರಿಂದ 5 ರವರು ಹಿಂದಿನ ದ್ವೇಷದಿಂದ ನದೀಮ್ ಪಾಷನನ್ನು ಕೊಲೆ ಮಾಡುವ ಉದ್ದೇಶ ಹೊಂದಿದ್ದರಿಂದ 1ನೇ ಆರೋಪಿ ಆತನನ್ನು ದಿಃ 14.05.2016 ರಂದು ನಾಯಂಡಹಳ್ಳಿಗೆ ಕರೆದುಕೊಂಡು ಬಂದು ಅಲ್ಲಿಂದ ಆರೋಪಿ 7 ರಿಂದ 9 ಆದ ನೀವು ನದೀಮ್ ಪಾಷನನ್ನು ಆಟೋ ರಿಕ್ಷಾ ಸಂಖ್ಯೆ ಕೆಎ-05-ಎಎಫ್-6562 ರಲ್ಲಿ ಕೂರಿಸಿ ಕೊಂಡು ಅಪರಾಧಿಕ ಒಳಸಂಚು ರೂಪಿಸಿ, ಆ ಒಳಸಂಚಿನಲ್ಲಿ ನೀವು ಕೂಡ ಪಕ್ಷಕಾರರಾಗಿ ಸದರಿ ನದೀಮ್ ಪಾಷನನ್ನು ಕೂರಿಸಿಕೊಂಡು ಮಾಗಡಿ ಸಮೀಪ ಹೊನ್ನಾಪುರ ಕೆರೆಯ ಬಳಿ ಇರುವ ದೇವಸ್ಥಾನದ ಬಳಿ ಕರೆದುಕೊಂಡು ಹೋಗಿದ್ದೀರಿ, ಆ ಮೂಲಕ ಆರೋಪಿಗಳಾದ ನೀನು ಭಾ.ದಂ.ಸಂ. ಕಲಂ. 120(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ಎರಡನೇಯದಾಗಿ, ಅದೇ ದಿನ ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ನದೀಮ್ ಪಾಷನನ್ನು ಕೊಲೆ ಮಾಡುವ ಉದ್ದೇಶದಿಂದ ಅಪರಾಧಿಕ ಒಳಸಂಚಿನ ಪಕ್ಷಕಾರರಾಗಿದ್ದುಕೊಂಡು ನದೀಮ್ ಪಾಷನನ್ನು 7ನೇ ಆರೋಪಿಗೆ ಸೇರಿದ ಆಟೋ ರಿಕ್ಷಾ ಸಂಖ್ಯೆ ಕೆಎ-05-ಎಎಫ್-6562 ರಲ್ಲಿ ಕೂರಿಸಿ ಕೊಂಡು ಮಾಗಡಿಯ ಹೊನ್ನಾಪುರ ಕೆರೆಯ ಬಳಿ ಕರೆದುಕೊಂಡು ಹೋಗಿ ಆರೋಪಿ 1 ರಿಂದ 6 ರವರು ನದೀಮ್ ಪಾಷನನ್ನು ದೇವಸ್ಥಾನದ ಹಿಂಭಾಗದ ಬಯಲು ಪ್ರದೇಶಕ್ಕೆ ಕರೆದುಕೊಂಡು ಹೋಗಿ ಡ್ರಾಗನ್ ಮತ್ತು ಇತರೇ ಹರಿತವಾದ ಆಯುಧಗಳಿಂದ ಚುಚ್ಚಿ ನದೀಮ್ ಪಾಷನನ್ನು ರಕ್ತಗಾಯಪಡಿಸಿ ಕೊಲೆ ಮಾಡಿರುವುದರಿಂದ, ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ. 302 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

(ಗೋಪಾಲ ಕೃಷ್ಣ ರೈ.ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ